Construction of E.S.I. Hospital at Davanagere City

305. SRI PAMPAPATHI (Dananagere).—Will the Minister for Labour be pleased to state.

(a) whether the Government propose to construct an E.S.I. Hospital in Davanagere which is an industrial centre,

(b) if so, whether Government has taken any steps for purchase of site etc., for construction of hospital,

(c) the time required to construct the hospital as per Government scheme ?

SRI A.B. JAKANUR (Minister for Labour).—

(a) Yes.

(b) Yes.

(c) Six months time is required to commence the work of E.S.I. Hospital building at Davanagere. After commencement, two years time are required to complete the building work.

ಶ್ರೀ ಪಂಪಾಪತಿ.—ದಾವಣಗೆರೆಯಲ್ಲಿ ಇ.ಎಸ್.ಐ. ಆಸ್ಪತ್ರೆ ಕಟ್ಟುವ ಬಗ್ಗೆ ಕೇಳಿದ್ದೇನೆ. ಅಲ್ಲಿ ಸುಮಾರು ೨೦ ಸಾವಿರ ಜನ ಕಾರ್ಡ್ ಹೋಲ್ಡರ್ಸ್ ಇದ್ದಾರೆ. ಅವರ ಮನೆತನದವರಿಗೆಲ್ಲ ಔಷಧಿ ಒದಗಿಸತಕ್ಕ ವ್ಯವಸ್ಥೆ ಆಗಬೇಕಾಗಿದೆ. ಅಲ್ಲಿ ಒಂದು ಆಸ್ಪತ್ರೆ ಕಟ್ಟಿಡ ಆಗಬೇಕೆಂದು ಕಳೆದ ೧೦ ವರ್ಷ ಗಳಿಂದ ಪ್ರಯತ್ನ ನಡೆಯುತ್ತಿದೆ. ಆದರೂ ಕೂಡ ಅದು ಇನ್ನೂ ಕಾರ್ಯಗತವಾಗದೆ ಇರುವುದಕ್ಕೆ ಏನು ಕಾರಣವೋ ಗೊತ್ತಿಲ್ಲ. ತಾವು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಇನ್ನು ೬ ತಿಂಗಳಲ್ಲಿ ಪ್ರಾರಂಭ ಮಾಡುತ್ತೇವೆ ಮತ್ತು ೨ ವರ್ಷದಲ್ಲಿ ಪೂರ್ಣಗೊಳಿಸುತ್ತೇವೆ ಎಂದು. ಆದರೆ ೬ ತಿಂಗಳ ಕಾಲವಾದರೂ ಏತಕ್ಕೆ ತಡವಾಗಬೇಕು ಮತ್ತು ೨ ವರ್ಷದವರೆಗೆ ಏಕೆ ಕಾಯಬೇಕು ? ಅದಕ್ಕೆ ಹಣದ ಕೊರತೆ ಏನಾದರೂ ಇದೆಯೇ ?

ಶ್ರೀ ಎ.ಬಿ. ಜಕನೂರ್.—ಅದಕ್ಕೆ ಹಣದ ಕೊರತೆ ಏನು ಇಲ್ಲ. ತಡವಾಗಲಿಕ್ಕೆ ಕಾರಣವೇನೆಂದರೆ, ಜಮೀನು ಬೇಕಾಗಿತ್ತು. ಜಮೀನನ್ನು ಆಕ್ವೈರ್ ಮಾಡಿಕೊಳ್ಳಬೇಕಾದರೆ ಬಹಳಷ್ಟು ಪ್ರೊಸೀಜರ್‌ಗಳಿರುವುದರಿಂದ ಸ್ವಲ್ಪ ದಿನ ತಡವಾಗುತ್ತದೆಂದು ಹೇಳಿದ್ದೇವೆ. ಈಗಾಗಲೇ ಜಮೀನನ್ನು ತೆಗೆದುಕೊಂಡಿದ್ದೇವೆ. ಪ್ಲಾನ್ ಮತ್ತು ಎಸ್ಟಿಮೇಟ್ ಆಗಬೇಕಾಗಿದೆ. ಅದನ್ನು ಚೀಫ್ ಇಂಜಿನಿಯರ್ ಕಡೆ ಕಳುಹಿಸಿದ್ದೇವೆ. ಇವತ್ತು ಆದರ ಬಗ್ಗೆ ಫೋನ್‌ನಲ್ಲಿ ಮಾತನಾಡಿ ಆದಷ್ಟು ಬೇಗ ಕಳುಹಿಸಿಕೊಡಿ ಎಂದು ಹೇಳಿದ್ದೇನೆ. ಅದು ಸ್ವಲ್ಪ ದಿವಸದಲ್ಲಿ ಬರುತ್ತದೆ, ನಂತರ ಮಂಜೂರಾಗಿ ಕಟ್ಟಿಡ ಪ್ರಾರಂಭವಾಗಿ ಮುಗಿಯಬೇಕಾದರೆ ಸುಮಾರು ೨ ವರ್ಷ ಆಗಬಹುದೆಂದು ಹೇಳಿದ್ದೇವೆ.

ಶ್ರೀ ಪಂಪಾಪತಿ.—ಆ ಆಸ್ಪತ್ರೆಯಲ್ಲಿ ಎಷ್ಟು ಹಾಸಿಗೆಗಳನ್ನು ಹಾಕಬಹುದು ?

ಶ್ರೀ ಎ.ಬಿ. ಜಕನೂರ್.—೫೦ ಹಾಸಿಗೆಗಳನ್ನು ಹಾಕಬಹುದು.

ಶ್ರೀ ಪಂಪಾಪತಿ.—೧೦ ವರ್ಷದ ಹಿಂದೆ ೫೦ ಹಾಸಿಗೆಗಳನ್ನು ಹಾಕತಕ್ಕ ಆಸ್ಪತ್ರೆಯನ್ನು ಕೂಡ ಬೇಕೆಂಬ ಯೋಜನೆ ಇತ್ತು. ಆದರೆ ಈಗ ನಗರ ದಿನೇ ದಿನೇ ಬೆಳೆಯುತ್ತಿದೆ, ಕೈಗಾರಿಕೆಗಳು ಬೆಳೆಯುತ್ತಿವೆ. ಆದುದರಿಂದ, ತಾವು ಈಗಲೇ ೧೦೦ ಹಾಸಿಗೆ ಹಾಕತಕ್ಕ ಆಸ್ಪತ್ರೆಯನ್ನು ಕಟ್ಟುವುದಕ್ಕೆ ಯೋಚಿಸುತ್ತೀರಾ ?

ಶ್ರೀ ಎ.ಬಿ. ಜಕನೂರ್.—ಇಲ್ಲ. ಮೊದಲು ೫೦ರದ್ದು ಆಗಲಿ, ಮುಂದೆ ಬೇಕಾದರೆ ವಿಸ್ತರಿಸಬಹುದು.

ಶ್ರೀ ಪಂಪಾಪತಿ.—ಈ ಒಂದು ಕಾರ್ಯ ಮಾಡಲು ಆದಷ್ಟು ಜಾಗ್ರತೆ ಪ್ರಯತ್ನಿಸುತ್ತೀರಾ ?

ಶ್ರೀ ಎ.ಬಿ. ಜಕನೂರ್.—ಬಹಳ ಜಾಗ್ರತೆ ಮಾಡುತ್ತೇನೆ.

Minor Irrigation Tanks in Sandur Taluk

347. SRI C. RUDRAPPA (Sandur).—Will the Minister for Transport and Minor Irrigation be pleased to state :

(a) the number of Minor Irrigation Tanks and Pickups surveyed in Sandur Taluk upto the year 1979,

(b) whether the list of villages where surveys of such tanks have been completed with estimated cost and feasibility report of the same will be laid on the table of the House;

(c) whether Construction works of the following tanks had been included in the Budget for the year 1978,

1) Ankammanahal Tank,
2) Lakkalahalla Tank,
3) Nagalapur Tank,

(d) if so, the reasons for delay in taking up the above works ?

SRI M. M. J. SADYOJATHA (Minister for Transport and Minor Irrigation.—

(a) Tanks—8, Pickups—Nil

(b) List Laid on the Table*

(c) Yes

(d) Details are given in the List Laid on the Table*

ಶ್ರೀ ಸಿ. ರುದ್ರಪ್ಪ.—ನಮ್ಮ ಸಂಡೂರು ತಾಲ್ಲೂಕಿನಲ್ಲಿರತಕ್ಕ ನೀರಾವರಿ ಕೆರೆಗಳು ೮ ಎಂದೂ ಮತ್ತು ಪಿಕ್‌ಅಪ್‌ಗಳು ಇಲ್ಲವೆಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಆದರೆ ೨ ಪಿಕ್‌ಅಪ್ಸ್ ಇವೆ; ತಾವು ಒಂದೂ ಇಲ್ಲವೆಂದು ಹೇಳಿದ್ದೀರಿ. ೧೯೭೮ ಆಯವ್ಯಯದಲ್ಲಿ ೪ ಕೆರೆಗಳನ್ನು ನಿರ್ಮಾಣ ಮಾಡಲಿಕ್ಕೆ ಮಂಜೂರಾತಿ ನೀಡಿದ್ದೀರಿ. ಆದರೆ ನಿಮ್ಮ ಉತ್ತರದಲ್ಲಿ ೩ ಕೆರೆಗಳ ಹೆಸರನ್ನು ಮಾತ್ರ ಹೇಳಿ ರಾಜಾಪುರ ಕೆರೆಯ ಕೆರೆಯ ಹೆಸರನ್ನು ಬಿಟ್ಟಿದ್ದೀರಿ. ಮತ್ತು ಅವುಗಳನ್ನು ಇನ್ನೂ ಕಾರ್ಯಗತ ಮಾಡಿಲ್ಲ. ಇದರಲ್ಲಿ ಅಂಕಮ್ಮನ ಹಾಲ್ ಕೆರೆ ಬಗ್ಗೆ ಮುಖ್ಯ ಇಂಜಿನಿಯರ್‌ರವರಿಂದ ವರದಿ ಬಂದಿದೆ. ಅಲ್ಲಿ ತೀವ್ರ ಅಭಾವ ಪರಿಸ್ಥಿತಿ ಇರುವುದರಿಂದ ಆದನ್ನು ತೀವ್ರವಾಗಿ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಆ ಕೆರೆಯ ಕೆಲಸವನ್ನು ವಿಶ್ವಬ್ಯಾಂಕಿನ ಯೋಜನೆ ಮೂಲಕ ತೆಗೆದುಕೊಳ್ಳಬೇಕೆಂದು ಏರ್ಪಾಡು ಮಾಡಲಾಗಿದೆ. ಆದರೆ ಆ ಭಾಗದಲ್ಲಿ ಅಭಾವ ಪರಿಸ್ಥಿತಿ ಬಹಳವಾಗಿರುವುದರಿಂದ ಆ ಕೆಲಸವನ್ನು ಸ್ಕೆರ್‌ಸಿಟಿ ವರ್ಕ್ಸ್‌ನಲ್ಲಿ ಸೇರಿಸಿಕೊಂಡು ಪ್ರಾರಂಭ ಮಾಡಬೇಕೆಂಬ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ. ಒಟ್ಟಿನಲ್ಲಿ, ಆದಷ್ಟು ಜಾಗ್ರತೆ ಪ್ರಾರಂಭ ಮಾಡುತ್ತೇವೆ.

---

* Copy placed on the Karnataka Legislature Library Vide No. 13 Dated 14-3-81